ಅ) ಸದರಿ ರಸ್ತೆಗಳು ಯಾವುವು ಮತ್ತು ಅದಕ್ಕಾಗಿ ನಿಗದಿಪಡಿಸಲಾದ ಹಣವೆಷ್ಟು?

ಇ) ಈಗಾಗಲೇ ಎಷ್ಟು ರಸ್ತೆಗಳ ಅಭಿವೃದ್ಧಿ ಕೆಲಸ ಪ್ರಾರಂಭಿಸಲಾಗಿದೆ ಮತ್ತು ಉಳಿದ ರಸ್ತೆಗಳ ಅಭಿವೃದ್ಧಿ ಕೆಲಸ ಎಂದಿನಿಂದ ಪ್ರಾರಂಭಿಸಲಾಗುವುದು (ವಿವರಗಳನ್ನು ಒದಗಿಸುವುದು)

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) 1996-97ನೇ ಸಾಲಿನಲ್ಲಿ 119 ಗ್ರಾಮೀಣ ರಸ್ತೆಗಳ ಸುಧಾರಣೆ ಒಪ್ಪಿತವಾಗಿದೆ. 1997-98ರಲ್ಲಿ ಈವರೆವಿಗೆ ಯಾವ ರಸ್ತೆ ಕಾಮಗಾರಿಗಳು ಇನ್ನು ಒಪ್ಪಿತವಾಗಿಲ್ಲ.

ಆ) ರಸ್ತೆಗಳ ವಿವರ ಅನುಬಂಧ 1ರಲ್ಲಿ ಸಲ್ಲಿಸಿದೆ.

ಇ) ಯಾವುದೂ ಪ್ರಾರಂಭಿಸಿರುವುದಿಲ್ಲ ಗುತ್ತಿಗೆ ನಿಷ್ಕರ್ಷೆ ಆದ ನಂತರ ಕೆಲಸಗಳನ್ನು ಪ್ರಾರಂಭಿಸಲಾಗುವುದು.

ಹುಬ್ಬಳ್ಳಿ ಮಹಾನಗರ ಮಧ್ಯದಲ್ಲಿ ಹಾಯ್ದು ಹೋಗುವ ರಸ್ತೆ ದುರಸ್ತಿ ಕುರಿತು

1667 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ಮಹಾನಗರ ಮಧ್ಯದಲ್ಲಿ ಹಾಯ್ದು ಹೋಗುವ ಲೋಕೋಪಯೋಗಿ ಇಲಾಖೆ ರಸ್ತೆಗಳು ತೀರಾ ಹದಗೆಟ್ಟಿದ್ದು ಸಂಚಾರಕ್ಕೆ ತೊಂದರೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ರಸ್ತೆಯ ದುರಸ್ತಿ ಅಥವಾ ಅಭಿವೃದ್ಧಿಗೆ ಸರ್ಕಾರವು ಕೈಗೊಂಡ ಕ್ರಮಗಳೇನು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಬಂದಿದೆ.

ಆ) ಹುಬ್ಬಳ್ಳಿ-ಧಾರವಾಡ ಮಹಾನಗರಸಭೆ ವ್ಯಾಪ್ತಿಯಲ್ಲಿ ಲೋಕೋಪಯೋಗಿ ವಿಭಾಗ, ಧಾರವಾಡಕ್ಕೆ ಸಂಬಂಧಪಟ್ಟಂತೆ ಒಟ್ಟು 36.98 ಕಿ.ಮೀ. ರಾಜ್ಯ ಹೆದ್ದಾರಿ ಹಾಗೂ 15.50 ಕಿ.ಮೀ. ಜಿಲ್ಲಾ ಮುಖ್ಯ ರಸ್ತೆಗಳು ಇರುತ್ತದೆ. ಸದರೀ ರಸ್ತೆಗಳ ವಾರ್ಷಿಕ ನಿರ್ವಹಣೆಯನ್ನು ಲಭ್ಯವಿರುವ ಅನುದಾನದಲ್ಲಿ ಕಾಲಕಾಲಕ್ಕೆ ಮಾಡಿಕೊಳ್ಳುತ್ತಾ ಬರಲಾಗಿದೆ. ಅಲ್ಲದೆ ಈ ಮಹಾನಗರಸಭೆ ಎರಡು ವಿಧಾನಸಭಾ ಕ್ಷೇತ್ರಗಳನ್ನು ಒಳಗೊಂಡಿದ್ದು (ಧಾರವಾಡ-ಶಹರ ಹಾಗೂ ಹುಬ್ಬಳ್ಳಿ-ಶಹರ) ಪ್ರಸ್ತುತ ಸಾಲಿನಲ್ಲಿ ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ (30 ಲಕ್ಷ ಕಾರ್ಯಕ್ರಮದಡಿ) ಒದಗಿಸಲಾದ ಅನುದಾನದಲ್ಲಿ ಎಲ್ಲ ಕಾಮಗಾರಿಗಳು ಮಂಜೂರಾಗಿದ್ದು, ಟೆಂಡರ್ ಕರೆದು ಗುತ್ತಿಗೆದಾರರನ್ನು ನೇಮಿಸಲಾಗಿದೆ ಹಾಗೂ ಕಾಮಗಾರಿಗಳು ಪ್ರಗತಿಯಲ್ಲಿದೆ.